ಮಂಜುಳಾ ಜಿ.ಎಚ್. ಬೆಂಗಳೂರಿನ ಸುರಾನಾ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿ. ಕಾವ್ಯ, ಕಥೆ, ವಿಮರ್ಶೆ ಮತ್ತು ಅನುವಾದ ಕ್ಷೇತ್ರದಲ್ಲಿ ಆಸಕ್ತರು. 'ನುಡಿಯ ನೆರಳು' ಅವರ ಪ್ರಕಟಿತ ವಿಮರ್ಶಾ ಕೃತಿ.

ಬರಲಾರದ ಕೂಸು. ಅವತ್ತಿಂದ ನಿನ್ನ ನೋಡ್ಕೊತ ಬಂದಿನಿ. ನನ್ ಮನಿ ಸೊಸಿ ಮಾಡ್ಕೊಬೇಕಂತ ಅವತ್ತಿಂದ ನಿರ್ಧಾರ ಮಾಡಿದ್ನಿ. ಮನಿ ಅಂದ್ರ ಒಂದ ಮಾತ್ ಬರುತ್ತಾ ಹೋಗುತ್ತಾ. ಅದಕ್ಕೆಲ್ಲ ಸಾಯೊ ನಿರ್ಧಾರ ಮಾಡ್ತಾರೇನು? ಹುಚ್ಚವ್ವ ಬ್ಯಾಡ, ಬ್ಯಾಡವ ಕಾಳವ್ವ ಮನಿ ಮುಚ್ಚಿ ಹೋಕ್ಕತ್ತಿ. ಬಾ ಕಾಳವ್ವ ಮನಿಗೋಗುನು...' ಅಂತೇಳ್ತಾ ಕಾಳವ್ವನ ಮನಿಗೆ ಕರ್ಕೊಂಡು ಹೊಕ್ಕಾಳ.

'ಪಾಪ ನಾನು ಮನಸ್ಸಿಗೆ ನೋವಾಗೊವಂಗ ನಡ್ಕೊಂಡೆ, ಮಾತಾಡ್ದೆ. ಆಕಿ ಆದ್ರು ಏನ್ ಮಾಡ್ಯಾಳು? ಅವ್ನ ಬುದ್ಧಿ ನೆಟ್ಟಗಿಲ್ಲ ಅಂದ್ರ, ಅದ್ಕ ಇಕಿನ ಮ್ಯಾಲೆ ಏರಿ ಹೋದ್ರ? ತಪ್ಪು ನಂದೆ...' ಅಂತ ಅನ್ನಿಸುತ್ತ. 'ಆದರ, ಗಂಡ ಸತ್ತೋದ ಮ್ಯಾಲೆ ನಾನು ಯಾರ ಮ್ಯಾಲೆ ಸೆಡವು ತೋರಿಸಲಿ? ಯಾರ ಹತ್ರ ನನ್ ನೋವು ಹೇಳ್ಕೊಳ್ಳಿ? ಅದ್ಕ ಇಕಿನ ಮ್ಯಾಗ ನನ್ ಕೋಪ ತೋರಿಸ್ತಾ ಇದ್ದೆ. ಈಗ ನಂದೇ ತಪ್ಪು ಅಂತ ಅನ್ನಿಸಾಕಹತ್ತೇತಿ. ಎಷ್ಟೇ ನೋವು ಸಂಕಟ ಇದ್ರೂ ನಾನೇ ಅದಮಿ ಇಟ್ಕೊಬೇಕು. ಹೊಟ್ಯಾಗ ಎರಡು ರೊಟ್ಟಿ ಹಿಡಿಸುತ್ತಲ್ಲ? ಹಂಗ ಕೋಪನೂ ಇಟ್ಕೊಬೇಕು. ಯಾವ ಕಾರಣಕ್ಕೂ ಅಕಿ ಮ್ಯಾಲೆ ಸಿಟ್ಟು ಮಾಡ್ಕೊಬಾರದು' ಅಂತ ನಿರ್ಧಾರ ಮಾಡಿದಳು.

ಹಿಂಗ ಒಂದೆರೆಡು ವಾರ ಕಳಿತು. ಇವತ್ತು ಅಕಿ ಹೊಲದಿಂದ ಬರಬೇಕಾದ್ರ, ಖುಷಿಲಿದ್ಲು. 'ಏನಿವತ್ತು? ಮಾರಿ ಮ್ಯಾಗ ಇಷ್ಟೊಂದ್ ಗೆಲುವು ಕಾಣಾಕತ್ತೇತಿ?' ಅಂದಳು. 'ಅತ್ತಿ ನಮ್ ಬಸಪ್ಪ ಮಾವನ ಸೊಸೆಗೆ ಮೂರು ತಿಂಗಳಾಗೇತಂತ. ಅದ್ಕ ಖುಷಿ ಆತು. ಆಕೀ ಮದ್ವೆಯಾಗಿ ಹದಿಮೂರು ವರ್ಷ ಆಗಿತ್ತು.'

'ಹ್ಯಾಂಗ? ಎಲ್ಲಿ ತೋರಿಸ್ಯಾಳಂತ ದಾವಾಖಾನಿಗೆ?'

'ಇದು ದಾವಾಖಾನಿ ಪವಾಡ ಅಲ್ಲ ಅತ್ತಿ. ನಮ್ಮೂರಿನ ಬೆಟ್ಟದ ಮೇಲಿರೊ ದೇವಸ್ಥಾನಕ್ಕೆ ಅಮಾವಾಸ್ಯೆ ದಿನದಿಂದ ಹದಿನೈದು ದಿನ ಬಿದಿರುಮೆಳೆ ಸೇವೆ ಮಾಡ್ತಿನಿ ಅಂತ ಹರಕೆ ಕಟ್ಕೊಂಡಿದ್ಲಂತ. ಅದಕ್ಕೆ ಮಕ್ಕಳಾಗಿದ್ದಂತೆ.'

'ತಗೊ ಯವ್ವ ಊರಿಂದ ದೂರಿರೋ ಆ ಗುಡ್ಡದ ಮ್ಯಾಲಿರೋ ದೇವಸ್ಥಾನದ ಒಳಗ ಒಬ್ಬಾಕಿ ಇರೋದು ಅಂದ್ರ ಏನು?'

'ಹಿಂಗಂತೇಳಿ ಪೂಜಾರಪ್ಪನ ಮೈಮ್ಯಾಲೆ ದೇವರು ಬಂದು ಕಾರ್ಣಿಕ ಹೇಳಿದ್ನಂತ, ದೇವರು ಹೇಳಿದ್ ಮ್ಯಾಲೆ ಪಾಲಿಸ್ಲೇಬೇಕಾಕೆತ್ತಿ ಅತ್ತಿ. ಅದ್ಕ ಆಕಿ ಗಟ್ಟಿ ಜೀವ ಮಾಡ್ಕೊಂಡು ಒಂದು ವಾರ ಅದಾಳ. ಆದಾದ ಸ್ವಲ್ಪ ದಿನಕ್ಕೆ ನಿಂತ ಬಿಟ್ಟೇತಿ ನೋಡು.'

'ಚಲೋ ಅತು ಬಿಡು. ನಾಳೆ ಮುಂಜಾನೇನೆ ಪೂಜಾರೆಪ್ಪನ ಮನಿಗೆ ಹೋಗುನು. ಪೂಜಾರೆಪ್ಪನ ದೇವ್ರು ನಮ್ಗೂ ದಾರಿ ತೋರಿಸ್ತಾನ.'

'ಅದ್ರ ಅತ್ತಿ ಮೊದ್ಲು ಬಸಪ್ಪ ಮಾವನ ಮನಿಗೋಗಿ ನಿಂಗವ್ವನ್ನ ಮಾತಾಡಿಸಿಕೊಂಡು ಹೋಗುನು.'

'ಸರಿ ತಗೊ ಅಷ್ಟೇ ಮಾಡುನು' ಅಂತ ಅಂದ್ಲು.

ಮುಂಜೇಲೆ ಆಗೋದೆ ಕಾಯಾಕತ್ತಿದ್ಲು ಕಾಳವ್ವ. ಹರಿವಿಲೆ ಎದ್ದು ಎಲ್ಲಾ ಕೆಲಸ ಮುಗಿಸಿದ್ಲು, ಅತ್ತಿ ಎಲ್ಲಾ ಕೆಲಸದಾಗೂ ಕೈ ಜೋಡಿಸಿದ್ಲು. ಸವಾರಿ ನಿಂಗವ್ವನ ಮನಿ ಕಡೆ ಹೊಂಟ್ತು. ನಿಂಗವ್ವ ತಟಗ ದಪ್ಪಾಗಿದ್ಲು ಮತ್ತು ತಟಗ ಮ್ಯಾಕ್ ಹೋಗಿದ್ಲು. ಯಾಕಂದ್ರ ಎಲ್ರು ಬಂದು ತನ್ನ ಗುಡ್ಡದಾಗಿರೋ ದೇವಸ್ಥಾನದ ಛಾವಡಿನಲ್ಲಿ ಒಬ್ಬೆ ಇದ್ದು ದೇವರಿಗೆ ನಡೆದುಕೊಂಡಿದ್ರ ಬಗ್ಗೆ ಕೇಳ್ತಿದ್ರು. ಈಗೀಗ ಆಕಿಗೆ ಕೆಲಸ ಮಾಡಾಕೂ ಪುರುಸೊತ್ತಿಲ್ಲ ಅನ್ನೊ ಹಂಗ ಆಗಿತ್ತು. ಮನಸ್ಸಿನ್ಯಾಗ ದೇವರೆಗೆ ಕೈ ಮುಗಿಯಾಕ ಹತ್ತಿದ್ಲು. ಕಾಳವ್ವ ಬಂದಿದ್ದೆ, ಅಕ್ಕ ಬೇ ಹೆಂಗಿದ್ದಿ ಅಂತ ತೆಕ್ಕಿ ಬಡ್ಕೊಳಾಕೆ ಹೋದ್ಲು. ಆದ್ರ ಆಕಿ, ಕಾಳವ್ವ ತಡಿ! ತಡಿ! ನಾ ಖಾಲಿ ಮನುಷ್ಯಳಲ್ಲ... ಎಂದು ಕೈ ಹೊಟ್ಟಿಗೆ ಅಡ್ಡಿ ಹಿಡದ್ಲು. ಅಕಿಗೆ ಆಗ ಅರಿವಾತು. ನಿಂಗವ್ವ ಹೆಂಗದಿ ಬೇ, ಎಂದು ರಾಮವ್ವ ಮಾತಾಡಿಸಿದ್ಲು. ಎಲ್ಲಾ ಪೂಜಾರೆಪ್ಪನ ದೇವರ ಪುಣ್ಯಬೇ ಅತ್ತಿ ಚಲೋ ಅದಿನಿ. ಇದ್ದ ಒಂದ್ ಚಿಂತಿನು ಕಳಿತು ಬಿಡವ್ವ. ಅನ್ನೊತ್ತಿಗೆ ಶರಣವಕ್ಕ ಒಳಗಿಂದ ಪಾನಕದ ತಂಬಿಗಿ ತಂದಿದ್ಲು. ಅದನ್ಯಾಕ ತರಕಾ ಹೋಗಿದ್ದಿ; ಕುಡಿಬೇ ಯಕ್ಕ ನೀ ಬಾಳ ದಿನಕ ಬಂದಿ ಸುಮ್ನೆ ಬರಾಕೆಲ್ಲ ಅಂತೇಳಿ ಮಾತಿಗಿಳಿದ್ಲು.

'ಅದೇ ನಿಂಗವ್ವನ ಸುದ್ದಿ ಗೊತ್ತಾತು ಮಾತಾಡ್ಸಾನ ಅಂತೇಳಿ ಬಂದೆ.'